# ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY) 10 ವರ್ಷಗಳು

## ಇದೀಗ ಸುದ್ದಿಯಲ್ಲಿ:

ಸುಸ್ಥಿರ ಜಲ ನಿರ್ವಹಣೆ ಮತ್ತು ನೀರಾವರಿ ವ್ಯಾಪ್ತಿಯನ್ನು ವಿಸ್ತರಿಸುವ ಮೂಲಕ ಕೃಷಿ ರೂಪಾಂತರ ಮತ್ತು ಪರಿವರ್ತನೆಯನ್ನು ಉತ್ತೇಜಿಸಲು ಜಾರಿಗೆ ತಂದಿರುವ **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯು (PMKSY)** ಯಶಸ್ವಿಯಾಗಿ **10 ವರ್ಷ**ಗಳನ್ನು ಪೂರ್ಯೈಸಿದೆ.

## ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY)ಯ ಬಗ್ಗೆ:

- ಕೇಂದ್ರ ಸರ್ಕಾರವು ಈ ಪ್ರಮುಖ ನೀರಾವರಿ ಯೋಜನೆಯನ್ನು **2015** ರಲ್ಲಿ ಪ್ರಾರಂಭಿಸಿದೆ.
- ಈ ಯೋಜನೆಯು **'ಹರ್ ಖೇತ್ ಕೋ ಪಾನಿ'** (ಪ್ರತಿ ಜಮೀನಿಗೂ ನೀರು) ಮತ್ತು **'ಪ್ರತಿ ಹನಿಗೆ ಹೆಚ್ಚು ಬೆಳೆ'** (Per Drop More Crop) ಎಂಬ ದೂರದೃಷ್ಟಿಯನ್ನು ಹೊಂದಿದೆ.
- ಜಲ ಸಂಪನ್ಮೂಲಗಳನ್ನು ಸೃಷ್ಟಿಸುವುದರಿಂದ ಹಿಡಿದು, ಕೃಷಿ ಹಂತದವರೆಗೆ ನೀರಿನ ಸಮಗ್ರ ಅಭಿವೃದ್ಧಿ ಮತ್ತು ದಕ್ಷ ನಿರ್ವಹಣೆಯನ್ನು ಖಚಿತಪಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ.



## PMKSY ಯೋಜನೆಯ ಪ್ರಮುಖ ಘಟಕಗಳು:



ತ್ವರಿತ ನೀರಾವರಿ ಲಾಭದ ಕಾರ್ಯಕ್ರಮವು (AIBP) ಕೃಷಿಗೆ ಅಗತ್ಯವಿರುವ ನೀರಾವರಿ ಮೂಲಸೌಕರ್ಯ ಮತ್ತು ನೀರಿನ ಲಭ್ಯತೆಯನ್ನು ಸುಧಾರಿಸುತ್ತದೆ.



**'ಹರ್ ಖೇತ್ ಕೋ ಪಾನಿ' (HKKP)** ಘಟಕವು ಸಣ್ಣ ನೀರಾವರಿ ಮತ್ತು ಅಂತರ್ಜಲ ಸುಧಾರಣೆಯ ಮೂಲಕ ಖಚಿತ ನೀರಾವರಿ ಸೌಲಭ್ಯವನ್ನು ವಿಸ್ತರಿಸುತ್ತದೆ.



ಜಲಾನಯನ ಅಭಿವೃದ್ಧಿ ಘಟಕವು ಮಳೆಯಾಶ್ರಿತ ಮತ್ತು ಬರಪೀಡಿತ ಪ್ರದೇಶಗಳಲ್ಲಿ ಸಮಗ್ರ ಜಲಾನಯನ ನಿರ್ವಹಣೆಯನ್ನು ಉತ್ತೇಜಿಸುತ್ತದೆ.



**'ಪ್ರತಿ ಹನಿಗೆ ಹೆಚ್ಚು ಬೆಳೆ'** (Per Drop More Crop - PDMC) ಘಟಕವು ಹನಿ ನೀರಾವರಿ ಮತ್ತು ತುಂತುರು ನೀರಾವರಿಯಂತಹ ಸೂಕ್ಷ್ಮ-ನೀರಾವರಿ ತಂತ್ರಜ್ಞಾನಗಳ ಬಳಕೆಯನ್ನು ಉತ್ತೇಜಿಸುತ್ತದೆ.